SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 137 | ಮಂಗಳವಾರ 29–1–46 | ಬಿಡಿ ಪ್ರತಿ 3 ಪೈ

ಸಂಸ್ಥಾನ ಸುದ್ದಿಗಳು

ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಶ್ರೀ ಹಯವದನರಾಯರು ನಿನ್ನೆಯ ದಿವಸ ಬೆಂಗಳೂರಿನಲ್ಲಿ ವ್ಯತಿಕರಾದರು.

ನಿನ್ನೆಯ ದಿವಸ ವಿದ್ಯಾಶಾಲೆ ಮೈಸೂರು ಪೌರಸಭೆಯ ವಿಶೇಷಾಧಿವೇಶನವು ಸೇರಿ ಶ್ರೀಮನ್ಮಹಾರಾಜರವರಿಗೆ ಜಿ. ಸಿ. ಬಿ. ಪ್ರಶಸ್ತಿ ದೊರೆತಿದ್ದಕ್ಕಾಗಿ ರಾಜಭಕ್ತಿಯುತವಾದ ಅಭಿನಂದನೆಗಳನ್ನು ಸಲ್ಲಿಸುವ ನಿರ್ಣಯವನ್ನು ಮಾಡಿತು.

ಮುಂದಿನ ತಿಂಗಳು ತಾ || 1 ರಿಂದ ಕನ್ನಂಬಾಡಿ ಕಟ್ಟೆಯಲ್ಲಿ ನೀರಿನ ನುಟ್ಟುವು ಕಡಿಮೆಯಾಗಿರುವುದರಿಂದ ವಿಶೇಷ ವಿದ್ಯುದ್ದೀಪಾಲಂಕಾರಗಳು ವಜಾ ಮಾಡಲ್ಪಟ್ಟಿದೆ.

ಕಳೆದ ತಾ || 23 ರಲ್ಲಿ ಮಾಗಡಿ ತಾಲ್ಲೂ ಚಿಕ್ಕನಹಳ್ಳಿಯಲ್ಲಿ ಭಾರಿ ಅಗ್ನಿ ಪ್ರಮಾದ ನಡೆದು ಬೆಂದು ಹೋದ 21 ಮನೆಗಳಲ್ಲಿ 16 ಮನೆಗಳು ಸಂಪೂರ್ಣವಾಗಿ ಭಸ್ಮವಾದವು; ಒಬ್ಬ ಹೆಂಗಸು ಮತ್ತು ಒಬ್ಬ ಹುಡುಗನು ಮೃತರಾದರು. ಅಗ್ನಿಯಿಂದ ಗಾಯಗೊಂಡವರೊಬ್ಬನನ್ನು ಆಸ್ಪತ್ರೆಗೆ ಸೇರಿಸಲಾಯಿತು. 8 ಸಾವಿರ ರೂ. ಸಷ್ಟ ಅಂದಾಜಾಗಿದೆ.

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಚಂಗಲರಾಯರೆಡ್ಡಿಯವರು ಮಾರ್ಚಿ ತಿಂಗಳಲ್ಲಿ ಲಂಡನ್ನಿಂದ ಮೈಸೂರಿಗೆ ಹಿಂದಿರುಗುವುದಾಗಿ ತಿಳಿಯಬಂದಿದೆ.

ಬೆಂಗಳೂರಿನಲ್ಲಿ ನಿರ್ಮಾಣವಾಗುತ್ತಿರುವ 'ರಾಯಲ್' ಇಂಡಿಯಾ ಒಲಂಪಿಕ್ ಸ್ಟೇಡಿಯಂಗೆ ದಿವಾನರು ಭೇಟಿಯಿತ್ತು ಪರಿಶೀಲಿಸಿದರು.

ಕುಣಿಗಲ್ ತಾಲ್ಲೂಕು ಬ್ರಾಹ್ಮಣ ಸಭೆಯ ದ್ವಿತೀಯ ಸಮ್ಮೇಳನವು ಅಮೃತೂರಿನಲ್ಲಿ ಲೋಕಸೇವಾಸಕ್ತ ಗರುಡಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯುವುದು.

ಶ್ರೀ ವೇದವ್ಯಾಸಚಾರ್ಯರು
ಮಂತ್ರಿಗಳಾಗುವರೇ ?

ಮೈಸೂರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವೇದವ್ಯಾಸಚಾರ್ಯರಿಗೆ ಸಚಿವ ಪದವಿ ದೊರೆಯುವುದಾಗಿ ತಿಳಿಯಬಂದಿದೆ. ಶ್ರೀ ಎಂ.ಎ. ಶ್ರೀನಿವಾಸರಾಯರು ಬೊಂಬಾಯಿನ ತಾತಾ ಕಂಪೆನಿಗೆ ಹೋಗುವುದಾಗಿಯೂ, ಖಾಲಿ ಬಿದ್ದ ಆ ಸ್ಥಾನದಲ್ಲಿ ಶ್ರೀ ವೇದವ್ಯಾಸಚಾರ್ಯರು ಮಂತ್ರಿಯಾಗಿ ನೇಮಿಸಲ್ಪಡುವರೆಂದು ಹೇಳಲಾಗಿದೆ.

ಭಾರತೀಯರು ಅಷ್ಟು ಬಡವರಾಗಿರಬಾರದು

ಲಂಡನ್, ಜ 27 — ಮಿ || ಇ. ಎಂ. ಫಾಸ್ಟರರು ಪ್ರಖ್ಯಾತ ಬ್ರಿಟಿಷ್ ಕತೆಗಾರರು. ಹಲವಾರು ಕತೆ ಪುಸ್ತಕ ಪ್ರಚುರಿಸಿದ್ದಾರೆ. ಇವರು 25 ವರ್ಷದನಂತರ ಈಗ ಮತ್ತೆ ಭಾರತಕ್ಕೆ ಭೇಟಿಯಿತ್ತು ಈಗ ವಾಪಸ್ ಬಂದಿದ್ದಾರೆ. ಇವರು ಇಂಗಿನ ಭಾರತದ ಪರಿಸ್ಥಿತಿ ಬಗ್ಗೆ ಮಾಡಿದ ಆಕಾಶವಾಣಿ ಭಾಷಣದಲ್ಲಿ ಹೀಗೆಂದಿರುವರು — 'ಯಾವ ರಾಜಕೀಯ ಅನುಕೂಲತೆ ಕೇಳಲ್ಪಡುತ್ತಿದೆಯೋ ಅದನ್ನು ನಾನು ಕಾಣೆ. ಆದರೆ ಆ ಜನರು ಅಷ್ಟು ಬಡವರಾಗಿರಬಾರದೆಂಬುದನ್ನು ನಾನು ಒಲ್ಲೆ. ಖಾಯಿಲೆ ಮೋರೆಗಳಿಂದಿರುವುದೂ, ನಾನು ಹಿಂದೆ ಬೊಂಬಾಯಿನಲ್ಲಿ ಕ್ಯಾಂಪ್ ಮಾಡಿದ್ದಾಗ ಕಂಡ ಇಲಿಗಳ ಓಡಾಟ ಇರಬಾರದು' ಎಂದಿರುವರು.

ಕಳ್ಳ ವ್ಯಾಪಾರ ಪತ್ತೆ

ಚಿರೌಲಾ ಜ 25— ಕಳ್ಳ ಸಂತೆಯಲ್ಲಿ ಕೊಂಡು ಸಾಗಿಸುತ್ತಿದ್ದ 20 ಚೀಲ ಭತ್ತ ಹಿಡಿಯಲ್ಪಟ್ಟಿದೆ.

ಹುಬ್ಲಿ ಜ 25—ಹೊಳಪೇಟೆ ಮುರಾರಿ ಸೇಟ್ ಎಂಬುವನ ಶೇಖರಿಸಿಟ್ಟಿದ್ದ ನಾನಾ ತರಹದ ಕಾಗದಗಳ ಭಾರಿ ಸ್ಟಾಕ್ ಪತ್ತೆಯಾಗಿದೆ.

ಗಾಂಧೀಜಿಯವರ ಫೌಂಟೆನ್‌ಪೆನ್ ಹಾಳಾಗಿದೆ

ಮದರಾಸು ಜ 28— ಗಾಂಧೀಯವರ ಫೌಂಟೆನ್ ಪೆನ್ ಹಾಳಾಗಿರುವುದು ಗೊತ್ತಾಗಿದೆ. ಬೇರೆ ಫೌಂಟೆನ್‌ಪೆನ್‌ಗಳನ್ನು ಇತರರು ಕೊಡಲು ಒಂದೆರಡನ್ನು ಅವರು ತಿರಸ್ಕರಿಸಿದರು. ಇನ್ನು ಫೌಂಟನ್‌ಪೆನ್ ಗೋಜು ತಮಗೆ ಬೇಡವೆಂದೂ, ಸ್ಟೀಲ್‌ಪೆನ್ನನ್ನೇ ಉಪಯೋಗಿಸುವೆನೆಂದೂ ಅವರು ಹೇಳಿರುವರು.

ಭಾರತ ಸ್ವಾತಂತ್ರ್ಯವಿಲ್ಲದಿದ್ದರೆ ೩ನೇ ಯುದ್ಧ

ಲಂಡನ್ ಜ 26— ಭಾರತಕ್ಕೆ ಸ್ವಾತಂತ್ರ್ಯವು ಬ್ರಿಟಿಷ್ ಸಾಮ್ರಾಜ್ಯ ಶಾಹಿಯಿಂದ ದೊರೆಯದಿದ್ದಲ್ಲಿ, 3 ನೇ ಪ್ರಪಂಚ ಮಹಾಯುದ್ಧವು ಖಂಡಿತವೆಂದು ಪಾರ್ಲಿಮೆಂಟ್ ಸದಸ್ಯರಾದ ಮಿ || ಕೋವರು ಹೇಳಿರುವರು.

ವೈಸರಾಯರ ಭರವಸೆ

ನವದೆಹಲಿ ಜ 28— ಸೆರಕಾರದ ಕಾರ್ಯಕಾರಿ ಸಭೆಯಲ್ಲಿ ಕ್ಷೀಪ್ರದಲ್ಲಿ ರಾಜಕೀಯ ಪ್ರಮುಖರು ನಿಯಮಿತರಾಗುವರೆಂದು ಕೇಂದ್ರ ಶಾಸನ ಸಭೆಯಲ್ಲಿ ವೈಸರಾಯರು ಭರವಸೆಯಿತ್ತರು.

ಅಟಾಮಿಕ್ ಶಾಸ್ತ್ರಜ್ಞನಿಗೆ ಬಹುಮಾನ

ಮಾಸ್ಕೋ ಜ 27— ರಷ್ಯಾದಲ್ಲಿ ಅಟಾಮಿಕ್ ರಸಯನ ಶಾಸ್ತ್ರಜ್ಞನಿಗೆ ಸ್ಟಾಲಿನ್ ಬಹುಮಾನ 1 ಲಕ್ಷ ರೂ ಬಹುಮಾನ ಕೊಡಲ್ಪಟ್ಟಿದೆ.

ವಿವಿಧ ವೃತ್ತ

ಲಂಡನ್ ಪಾರ್ಲಿಮೆಂಟಿನ ಲೇಬರ್ ಸದಸ್ಯರಾದ ಮಿ || ಏಕ್ಟರ್‌ಬಟ್ಲರವರು ಬರ್ಮಿಂಗ್‌ಹಾಮಿನಲ್ಲಿ ಏರ್ಪಡಿಸಲ್ಪಾಗಿದ್ದ ಭಾರತ ಸ್ವಾತಂತ್ರ್ಯ ದಿನಾಚರಣೆಯ ಮಹೋತ್ಸವದಲ್ಲಿ ಭಾಷಣ ಮಾಡುತ್ತಾ 'ಭಾರತಕ್ಕೆ ಹೋಗಿರುವ ಪಾರ್ಲಿಮೆಂಟರಿ ನಿಯೋಗದಿಂದ ಪ್ರಯೋಜನವಾದ ಯಾವ ಕಾರ್ಯವೂ ಸಾಧಿಸದಂತಾಗುವುದಿಲ್ಲ. ಭಾರತ ಸ್ವಾತಂತ್ರ್ಯ ಕೂಡಲೇ ಘೋಷಣೆಯಾಗುವುದು ಅಗತ್ಯ' ಎಂದು ನುಡಿದಿರುವರು.

ಅಲಹಾಬಾದ್ ಪುರುಷೋತ್ತಮನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ದಿವಸ ಪಂಡಿತ ನೆಹರುರವರು ತಮ್ಮ ಉಜ್ವಲ ಭಾಷಣದಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಕುರಿತು ವಿವರಿಸಿದರು.

ಬೊಂಬಾಯಿನಲ್ಲಿ ನಡೆದ ಬೊಂಬಿಯಲ್ಲಿ 529 ಗಾಯಗಳೂ, 23 ಮರಣಗಳೂ ಆಗಿವೆ. ಈಗ ಅಲ್ಲಿ ಶಾಂತಿ ನೆಲೆಸಿರುವುದು.

ಬ್ರಿಟಿಷ್ ಪಾರ್ಲಿಮೆಂಟರಿ ನಿಯೋಗವು ಮೊನ್ನೆಯ ದಿವಸ ಬಂಗಾಳ ಗವರ್ನರ್ ಕ್ಯಾಸಿಯೊಡನೆ ಕಲ್ಕತ್ತೆಯಲ್ಲಿ ಪುನಃ ಭೇಟಿ ನಡೆಸಿತು.

ಜಾನ್ಸಿಯಲ್ಲಿ ಆಜಾದ್ ಹಿಂದ್ ಬಾಲ ಸೇನೆ ರೂಪುಗೊಂಡಿತು. ಈ ಸೇನೆಯವರೆಲ್ಲರೂ 10–12 ವರ್ಷ ವಯಸ್ಸಿನ ಬಾಲಕರು. ಪ್ರತಿಜ್ಞಾ ಪತ್ರಕ್ಕೆ ರಕ್ತದಿಂದ ರಜು ಮಾಡಿದರು.

ಕಾಂಗ್ರೆಸ್ ಮತ್ತು ಲೀಗಿನ ಧ್ಯೇಯಗಳು ಒಂದೇ ಗುರಿಯನ್ನು ಹೊಂದಿರಬೇಕೆಂದು, ಭಾರತ ಎಂಬ ಏಕ ಭಾವನೆ ಅವರುಗಳಲ್ಲಿ ಮೂಡಬೇಕೆಂದೂ ಪಾರ್ಲಿಮೆಂಟರಿ ನಿಯೋಗದ ಸಾರ್ವಜನಿಕ ಕಲ್ಕತ್ತಾದಲ್ಲಿ ಅಸೋಸಿಯೇಟೆಡ್ ವರದಿಕಾರರಿಗೆ ತಿಳಿಸಿದರು.

ಚುಂಕಿಂಗಿನಲ್ಲಿ ಕಮ್ಯುನಿಸ್ಟರಿಗೂ ಸರ್ಕಾರಕ್ಕೂ ಸಂಧಾನ ಆರಂಭವಾಗಿದೆ. ಕಮ್ಯುನಿಸ್ಟ್ ಪ್ರತಿನಿಧಿಯನ್ನಾಗಿ ಅಗಮಿಸಿದ್ದಾರೆ.

ನಿನ್ನೆಯ ದಿನದ ಮೈಸೂರು ಶಿವರಾಂಪೇಟೆಯಲ್ಲಿರುವ ಎಸ್. ಸಜ್ಜನರಾಯರ ಅಂಗಡಿಯಲ್ಲಿ ಬಟ್ಟೆ ಕೊಳ್ಳಲು ನೂಕನುಗ್ಗಲು ಹೆಚ್ಚಾದ ಸಮಯದಲ್ಲಿ ರಾಮಸೆಂಬುವನು ಗೋವಿಂದ ಶೆಟ್ಟಿ ಎಂಬಾತನ ಜೇಬಿನಲ್ಲಿದ್ದ ರೂ. 60 ನ್ನು ಕದ್ದನೆಂದು ಪೋಲಿಸಿಗೆ ಎಳೆದೊಯ್ದರು.

ಬೆಂಗಳೂರು ಪೌಂಸಭೆಗೆ ಶ್ರೀ ಗೋಪಾಲಸ್ವಾಮಯ್ಯಂಗಾರ್ ಮತ್ತು ದ್ವಾರಕೀಬಾಯಿ ಕಡಾಂಬಿಯವರು ರಾಜೀನಾಮೆಯಿತ್ತಿದ್ದಾರೆ

At Opera—
6 ನೇ ವಾರ

ತ್ಯಾಗರಾಜ ಭಾಗವತರ್ — ನಾಗೆಯ್ಯ.

ಕನ್ನಾಂಬಾ ಪಾತ್ರವಹಿಸಿರುವ

ಅಶೋಕ ಕುಮಾರ

At Ranjit

NAMA

ಅಶೋಕಕುಮಾರ್, ನೀನಾ, ಸಿತಾರ

ಪಾತ್ರವಹಿಸಿರುವ

ನಜ್ಲ

ಪ್ರತಿ ದಿನ 3 ಆಟಗಳು

ಹಸಕ್ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟ & ಸನ್ಸ

ಶಿವರಾಂಪೇಟೆ ಮೈಸೂರು.

ಅನುಸೂಯಾ (ರಿಜಿಸ್ಟರ್ಡ್)

ಸಿದ್ಧ ಮಹಾತ್ಮರಿಂದ ದೊರೆತಿರುವ ಈ ಮೂಲಿಕೆಯು ಗೂರಲು ರೋಗ ನಿವಾರಣೆ ಮಾಡುವದರಲ್ಲಿ ಪ್ರಖ್ಯಾತವಾದದ್ದು. 16-2-46 ನೇ ಫೋರ್ಣವಿೂದಿವಸ-ಒಂದು ಹೊತ್ತು ಮಾತ್ರ ಸೇವಿಸಿದರೆ ಗೂರಲು ಸಂಪೂರ್ಣವಾಸಿಯಾಗುವದು. ಇಂಗ್ಲೀಷಿನಲ್ಲಿ ಬರಯಿರಿ. ಕ್ಷಯ ರೋಗಕ್ಕೂ ಇಲ್ಲಿ ವೂಲಿಕೆ ಔಷಧ ಕೊಡಲಾಗುವುದು.

Sri Sant Sewa Ashram
P.O. Chitrakot. U.P. Dt. Banda

ಮೈಸೂರು ಸಿಟಿ ರೇಷನಿಂಗ್

No. R 1- 61/45-46

1946 ಇಸವಿ ಜನವರಿ ಮಾಹೆ 21 ನೆ ತಾರೀಖು ಗುರುವಾರ ದಿನದ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್‌ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿ ದಿನಶಿಗಳ ಎಣಿಕೆ ಮಾಡ ಬೇಕಾಗಿರುವುದರಿಂದ ಆ ದಿನದ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ. ರೆಡ್ಡಿ
ರೇಷನಿಂಗ್ ಆಫೀಸರ್

ತಾ||.21-1-46 ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪಧಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಳಿಂದ ಅಡಿಕೆವುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಡುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ಏಜೆಂಟರಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ಉತ್ತರ ಜರ್ಮನಿಯ ಇಜ್ಜಲು ನಿಯಂತ್ರಣ.

ರಕ್ತವದಿಗೆ – ಧಾತುಪುಷ್ಟಿಗೆ ಸಂಜೀವನ

ಅಕ್ಕಿ ಸುಧಾ

ಬೆಲೆ ಡಬ್ಬಿಗೆ ಕ್ಕೆ ಒಂದು ರೂಪಾಯಿ

ವಿಳಾಸ— ಶಕ್ತಿಸುಧಾ, ೧೦೬೭ ಬಾಮುಲಾಪುರಂ, ಮೈಸೂರು

ವಾರ್ತಾತರಂಗ

ಬರೋಡಾದಲ್ಲಿ ಈ ತಿಂಗಳು 26 ರಿಂದ 28 ರವರೆಗೆ ನಡೆಯುವ ಅ ಖಿ ಲ ಭಾರತ ಪುಸ್ತಕ ಭಂಡಾರ ಸಮ್ಮೇಳನದ ಅಂಗವಾಗಿ ಒಂದು ಪುಸ್ತಕ ಪ್ರದರ್ಶನವು ನಡೆಯುವುದು.

ಸಂಯುಕ್ತ ರಾಷ್ಟ್ರಗಳ ಅಸೆಂಬ್ಲಿಯು ಕಾರ್ಯದರ್ಶಿಗಳಿಗೆ ವರ್ಷಕ್ಕೆ 10 ಸಾವಿರ ಪೌಂಡುಗಳು ಕೊಡತಕ್ಕದ್ದೆಂದು ತೀರ್ಮಾನಿಸಲಾಗಿದೆ.

ಬೀಹಾರನಲ್ಲಿ 41 ಜನ ಕಾಂಗ್ರೆಸ್ ಉಮೇದುವಾರರು ಪ್ರತಿಸ್ಪರ್ಧಿ ಇಲ್ಲದೆ ಚುನಾಯಿತರಾಗಿದ್ದಾರೆ

ಅಸೋರಿಕಾದಲ್ಲಿ ಈಗ ಮುಷ್ಕರದಲ್ಲಿ ತೊಡಗಿರುವವರ ಸಂಖ್ಯೆ 1 ಮಿಲಿಯ 600 ಸಾವಿರವೆಂದು ಹೇಳಲಾಗಿದೆ.

ಅಡಾಬ್ ಫೌಜಿನ ಪರಿಹಾರಕ್ಕೆ ಕಡಿ ಪಕ್ಷ 4 ಕೋಟಿ ರೂಪಾಯಿಗಳಾದರೂ ಬೇಕೆಂದು ಷಾ ನವಾಜರು ಕಲ್ಕತ್ತಾದಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಹಳ್ಳಿ ಬೆಲೆಯ ನೋಟುಗಳ ಹಣವನ್ನು ಹಣವನ್ನು ರಿಜರ್ವ್ ಬ್ಯಾಂಕಿನವರು ಏನೊಂದೂ ಅಡ್ಡಿ ಆತಂಕವಿಲ್ಲದೆ ಪ್ರಾಪ್ತಿ ಮಾಡುವಂತೆ ಹುಕುಂ ಪಡೆಯಲು ಹಾಕಿದ್ದ ಅರ್ಜಿಯನ್ನು ಬೊಂಬಾಯಿ ಹೈ ಕೋರ್ಟು ಜಡ್ಜರು ವಜಾಮಾಡಿಬಿಟ್ಟರು.

ನಾಜಿಗಳು ಯೂರೋಪಿನಲ್ಲಿಯ ಆಸ್ತಿಪಾಸ್ತಿ ಲೂಟಿಮಾಡಲು ಗೋರಿಂಗನ ಅನುಮತಿಯಂತೆ ಒಂದು ವ್ಯವಸ್ಥಿತ ಏರ್ಪಾಡಿದ್ದಿತೆಂದು ನ್ಯೂರೆಂಬರ್ಗ್ ವಿಚಾರಣೆಯಲ್ಲಿ ಹೊರಪಟ್ಟಿದೆ.

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ.

ಅಂಚೆ ವೆಚ್ಚ ಕೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ, ಮೈಸೂರು

ಲಂಡನ್ ಜ 22— ಸಂಯುಕ್ತ ರಾಷ್ಟ್ರದ ಸಮ್ಮೇಳನದಲ್ಲಿ ರಷ್ಯಾ ಒಂದು ಸೂಚನೆಯನ್ನು ತಂದು, ಗ್ರೀಸ್ ಮತ್ತು ಇಂಡೋನೇಷಿಯಾ ಸಮಸ್ಯೆಯನ್ನು ಯು ಎನ್. ರಕ್ಷಣ ಸಮಿತಿ ಮುಂಜೆ ಶಪೇಕ್ಷೆಯಿರುವುದು ಬಾಂಬು ಬಿಡ್ಡಂತಾಗಿದೆ.

ಟೋಕಿಯೋ ಜ 21— ಜಪಾನಿನ ಯುದ್ಧ ಕೈಗಾರಿಕಾ ಸಂಸ್ಥೆಗಳನ್ನು ಹಿಡಿಯಲು ಮೆಕ್ಆರ್ಥರರ ಆಜ್ಞೆಯಾಗಿದೆ.

ಬೊಂಬಾಯಿ ಜ 21— ಹೆಚ್ಚು ಬೆಲೆ ನೋಟುಗಳ ರದ್ದಿನ ಕಾನೂನ ಟರುವುಕ್ಕೆ ಮುಂಜೆ ಬೊಂಬಾಯಿನಲ್ಲಿ 80 ಸಾವಿರ ಜನರು ತಮ್ಮ ಹಣಗಳನ್ನು ಈ ನೋಟುಗಳಲ್ಲಿಟ್ಟುಕೊಂಡಿದ್ದರಂತೆ.

ಪುದರಾಸು ಜ 22— ಅಂಬಟ್ಟೂರಿನಿಂದ ನಿನ್ನೆ ಸಂಜೆ ಮಹಾತ್ಮಾ ಗಾಂಧಿಯವರು ಹಿಂದೂಯಿತ್ಥಾನೀ ನಗರಕ್ಕೆ ಬಂದಾಗ ಭಾರಿ ಜನಸಮೂಹದಿಂದ ಸ್ವಾಗತಿಸಲ್ಪಟ್ಟರು. ಪಾರ್ಲಿಮೆಂಟರಿ ವಿಯೋಗವನ್ನು ನಾಳೆ ಭೇಟಿ ಮಾಡುತ್ತಾರೆ.

ಬೆಂಗಳೂರು ಜ 22— 19 ರಿಂದ 21 ರವರಗೆ ನಡೆದ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿಯು ಚರ್ಚೆಗೆ ಬಂದಾಗ ಶ್ರೀ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಕೇಂದ್ರ ಕಾಮ್ಗಾನು ನಿವಾರಣಾ ಸಮಿತಿ ರಚಿಸಲಾಯಿತು.

ಫ್ರಾಂಕ್‌ಫರ್ಟ್ ಜ 21— 1939 ರಿಂದೀಚೆಗೆ ಜರ್ಮನಿಯಲ್ಲಿ ನಡೆದ ಸ್ವರ್ಣಕ್ಕಾಗಿ ಜರುಗಿದ ಚುನಾವಣೆಯಲ್ಲಿ 4 ಲಕ್ಷ ಮಂದಿ ಒಟರುಗಳು ಭಾಗವಹಿಸಿದ್ದರು.

ಲಂಡನ್ ಜ 21— ಅಣು ಶಕ್ತಿಯಿಂದ ಯುದ್ಧ ನಿಭಾಯಿಸುವುದನ್ನು ತಡೆಗಟ್ಟಲು ಯು. ಎನ್. ಒ. ಅಸೆಂಬ್ಲಿಯಲ್ಲಿ 6 ಜನಾಂಗ ಸಮಿತಿ ಸ್ಥಾಪನೆಯ್ನು ಒಪ್ಪಿತವಳೆಯಿತು.

ಸುಕ್ಕೂರು ಜ 21— ಸುಪ್ರಸಿದ್ಧ ಏ. ಎನ್. ಎ. ಟಿ || ಡಿಳಿತಾನರಿಗೆ ಅನೇಕ ಸಂಸ್ಥೆಗಳು ನಿಧಿಯನ್ನರ್ಪಿಸಿ ನೋಟಿನ ಪೊಲೆಯನ್ನು ಕೊರಳಿಗೆ ಹಾಕಿ ಸನ್ಮಾನಿಸಿದರು

ಲಂಡನ್ ಜ 21— ಕಾಂಗ್ರೆಸ್ ವಜ್ರೋತ್ಸವಕ್ಕೆ ಸತಿ ರೂಸ್ವೆಲ್ಟ್ ಮತ್ತು ಸತಿ ಚರ್ಚಿಲ್‌ರಂಗ ಕೈಷೇಕರನ್ನು ಆಹ್ವಾನಿಸಬೇಕೆಂದು ಭಾರತ ಭಾರ್ಮಿಕ ಸಭೆ ಮುಖಂಡರು ನಿರ್ಣಯಿಸಿದರು

ಕೊಚ್ಚಿ ಜ 22— ಬರ್ಮಾ ಅಕ್ಕಿ ತಂದಿರುವ ಜಯವಿಸ್ತಿ ಹಡಗು ಕೊಚ್ಚಿ ರೇವನ್ನು ತಲಪಿದೆ. ಇದರಲ್ಲಿ ಒಂದಿರುವ ಅಕ್ಕಿ ಸೈಕಿ ಮೈಸೂರಿಗೆ 1600 ಟನ್ ದೊರೆಯುವುದೆಂದು ಹೇಳಲಾಗಿದೆ.

ಸೂರತ್ ಜ 22— ಈಗ ಭಾರತಕ್ಕೆ ಬಂದಿರುವ ಬ್ರಿಟಿಷ್ ಪಾರ್ಲಿಮೆಂಟರೀ ನಿಯೋಗದ ಸದಸ್ಯರಲ್ಲೊಬ್ಬರಾದ ಮೇಜರ್ ವಾಟ್‌ರವರು ಭಾರತಕ್ಕೆ ಈ ವರ್ಷ ಸ್ವರಾಜ್ಯ ಲಭಿಸುವುದೆಂದು ನಂಬಿರುವರೆಂಬ ವಿಷಯವನ್ನು ' ಫೋರಂ ' ಪತ್ರಿಕಾ ಸಂವಾದಕರಾದ ಮಿ || ಅಲ್ವಾರವರು ಹೊರಪಡಿಸಿರುವರು.

ಮದರಾಸು ಜ 23— ಈ ಸಾಲಿ ನೀಲಗಿರಿಯಲ್ಲಿ ಕುದುರೆ ಜೂಜು ಏಪ್ರಿಲ್-ಮೇ ತಿಂಗಳುಗಳಲ್ಲಿ ನಡೆಸಲು ಏರ್ಪಾಡುಗಳು ನಡೆಯುತ್ತಿರುವುದೆಂದು ತಿಳಿಯಬಂದಿದೆ.

ಇಲ್ಲಿನ ಸೊಯಿಸ್‌ದಲ್ಲಿರುವ ಸ್ಪ್ರಿಂಗ್‌ಫೀಲ್ಡ್ ಎಂಬಲ್ಲಿ ಒರ್ವನು ಸೇರಾಗಿ ಪೋಲೀಸು ಆಫೀಸರೊಡನೆ ಅವಸರವಸರವಾಗಿ ಮಾತನಾಡಲಾರಂಭಿಸಿದ. ವಿಷಯವೇನೆಂದು ವಿಚಾರಿಸಲಾಗಿ ' ಅಕ್ಕೊಳ್ಳಿ ಸನ್ನ ಪತ್ನಿ, ಸನ್ನನ್ನು ಹುಚಾಖಿಸಿ ಬರುತ್ತಿರುವಳು. ಆವಳ ಕೈಯಿಂದ ಒನ್ನೆ ಪಾರಾಗಬೇಕಾಗಿದೆ. ದಯವಿಟ್ಟು ಗನ್ನನ್ನು ಜೈಲಿನಲ್ಲಿ ಒಂದು ಕೋಣೆಯಲ್ಲಿ ಸೇರಿಸಿ ಬೀಗ ಮುದ್ರೆ ಮಾಡಿ ' ಎಂದು ಕಂಬೋಡಿಸಿ ಬೇಡಿದನಂತೆ.

ಆಹಾರ ಆರೋಗ್ಯವು ಜನಾಂಗದ ಸಂಪತ್ತು

ಪಂಡಿತ ಜವಹರಲಾಲ ನೆಹರುರವರು ಇತ್ತೀಚೆಗೆ ಕಲ್ಕತ್ತಾದ ಒಂದು ಬ್ಲಡ್ ಬ್ಯಾಂಕಿಗೆ ರಕ್ತದಾನ ನೀಡಿದ್ದರಷ್ಟೆ. ಇದನ್ನು ಕುರಿತು ಕಾನ್ಪುರದಲ್ಲಿನ ಹೆಣ್ಣು ವಿದ್ಯಾರ್ಥಿನಿಯರ ಒಂದು ಸಭೆಯಲ್ಲಿ ತೀವ್ರ ನಿಷೇಧ ಸೂಚಿಸಲಾಯಿತು. ' ಜವಹರರ ಆರೋಗ್ಯವು ಜನಾಂಗದ ಸಂಪತ್ತು ; ಅನುದಿನದಿಂದ ರಾಷ್ಟ್ರದ ಹಿತದ ದೃಷ್ಟಿಯಲ್ಲಿ ಅದನ್ನು ಜತನದಿಂದ ಕಾಪಾಡಬೇಕು. ಈ ರೀತಿಯ ಬಲಿದಾನಗಳು ಪ್ರಮುಖ ರಾಷ್ಟ್ರನೇರಿಗೆ ಸಲ್ಲದು ' ಎಂಬ ತರಾವನ್ನು ವಿದ್ಯಾರ್ಥಿನಿಯರು ಮಂಜೂರ್ಮಾಡಿದರು. (ಸ್ಪ)

ಶೀತದಿಂದ ಚೇತನ ಹೊಂದಲು ನಗ್ನ ಕನ್ನಿಕೆಯರು

ಶೀತ ಪ್ರದೇಶದಲ್ಲಿ ಹಾರಾಡಿ ಹಿಂದಿರುಗಿದ ವೈಮಾನಿಕರು ಕೆಲವೊಮ್ಮೆ ಚೇತನರಹಿತರಾಗಿ ಬೀಳುತ್ತಾರೆ. ಆಗ ಅವರಲ್ಲಿ ಉಷ್ಣವನ್ನುಂಟುಮಾಡಿ ಚೇತನ ಸಂಚಿಸಲು ಉಷ್ಣವೇರಿಸುವ ಸಾಧನಗಳು ಬೇಕಾಗುತ್ತವೆ ಹರ್ಮನ್ ಗೋರಿಂಗನು ನಾಜೀ ವೈಮಾನಿಕರನ್ನು ಶೀತ ಬಾಧೆಯಿಂದ ಚೇತರಿಸುವಂತೆ ಮಾಡಲು ಚಂದದ ಜಿಪ್ಸಿ ಕನ್ನಿಕೆಯರನ್ನು ನಗ್ನಗೊಳಿಸಿ, ವೈಮಾನಿಕರನ್ನೂ ಕನ್ನಿಕೆಯರನ್ನೂ ಒಂದೇ ಕಂಬಳಿಯಲ್ಲಿ ಸತಿ, ತನ್ಮೂಲಕ ಉಷ್ಣವೇರಿಸುವ ತೀವ್ರ ಪರಿಣಾಮಕಾರೀ ವಿಧಾನವನ್ನು ಹೂಡುತ್ತಿದ್ದನೆಂಬ ವಿಷಯ ಇದೀಗ ಬಹಿರಂಗವಾಗಿದೆ.

ಕೆಂಪು ಪನೆಗಳು ಬಿಳೀ ಬಣ್ಣಕ್ಕೆ ಮಾರ್ಪಟ್ಟವು.

ಮೆಕ್ಸಿಕೋದಲ್ಲಿ ಇತ್ತೀಚೆಗೆ ಎಟಾಮಿಕ್ ಶಕ್ತಿಯಿಂದ ವಿಚಿತ್ರ ಮಾರ್ಪಾಟುಗಳನ್ನು ತರಲು ಸಾಧ್ಯವಾಗಿದೆ ಹೆಯರ್ ಫೋರ್ಡ್ ಎಂಬಲ್ಲಿ ಅಟಾಮಿಕ್ ಶಕ್ತಿಯ ಪ್ರಯೋಗ ನಡೆದಾಗ್ಯೂ ಕೆಂಪು ದನಗಳ ಬಣ್ಣವು ಬಿಳಿಯಾಯಿತು. ಕೆಂಬೋಪೋ ಎಂಬಲ್ಲಿ ಒಂದು ಕರಿ ಬೆಕ್ಕು ಅರ್ಧ ಬಿಳಿಯಾಯಿತು.

ನಾಸಿಕ್ — ಭಾರತದ ಮುಖ್ಯ ಸೇನಾನಿ ಜನರಲ್ ಸರ್ ಜನರಲ್ ಕ್ಲಾಡ್ ಆಕಿನ್‌ಲೇಕ್ ಜಪಾನಿಗೆ ತೆರಳುವ ಬ್ರಿಟಿಷ್ ಮತ್ತು ಭಾರತೀಯ ದಳಗಳನ್ನು ಪರಿಶೀಲಿಸಿದರು. ಅಧಿಕಾರಿಗಳಿಗೆ ಹಲವು ಪ್ರಶಸ್ತಿಗಳನ್ನು ದಯಪಾಲಿಸಿದರು

ಚಿತ್ರಹಿಂಸೆ ಪಡುವಾಗಲೂ ರಾಜಭಕ್ತಿ

ನವ ದೆಹಲಿ, ಜ 23— 2 ನೇ ಅಶ್ವದಳದ ಅಧಿಕಾರಿ ಲೆ|| ಹರಿಚಂದ ಬಧ್ವಾರ್ ಅವರು ಜಪಾನಿಗಳ ಚಿತ್ರಹಿಂಸೆಗೆ ಗುರಿಯಾಗಿದ್ದರೂ ಸಹಿಸಿಕೊಂಡು ತಮ್ಮ ರಾಜಭಕ್ತಿಯನ್ನು ಮರೆಯದುದಕ್ಕಾಗಿ ಅವರಿಗೆ ಎಂ ಬಿ. ಇ ಪ್ರಶಸ್ತಿಯನ್ನು ಕೊಡಲಾಗಿದೆ. ಒದ್ದಾರವರನ್ನು ಶತ್ರುಗಳು ಕೂರಲು ಅಥವಾ ಮಲಗಲು ಸ್ಥಳವಿಲ್ಲದ ಇಕ್ಕಟ್ಟಾದ ಗೂಡಿನಲ್ಲಿ ಸೇರಿಸಿ ಹಗಲು ಬಿಸಲಿನಲ್ಲಿ ಒಣಗಿಸಿ ರಾತ್ರಿ ಕಣ್ಣು ಚುಚ್ಚುವ ಬೆಳಕು ಬಿಟ್ಟು ಪೀಡಿಸಿದರು. ಅವರಿಗೆ ಸುಮಾರು ಮಿತ್ರರು ದಯೆಯಿಟ್ಟು ಸ್ವಲ್ಪ ಆಹಾರ ಕೊಟ್ಟರೆ ಉಂಟು. ಇಲ್ಲವಾದರೆ ಇಲ್ಲ. ಮೊದಲಿಂದಲೂ ಬಧ್ವಾರರು ಬಹು ಧೈರ್ಯಶಾಲಿಗಳು. ಬಾಂಗ್‌ಕಾಕಿನಲ್ಲಿ ತಮ್ಮ ಜೊತೆಯ ಸೆರೆಯಾಳುಗಳ ಅನುಕೂಲಕ್ಕಾಗಿ ಬಹಳ ಪ್ರಯತ್ನ ಪಟ್ಟರು. ಕೊನೆಯ ವರೆಗೂ ಅವರ ರಾಜಭಕ್ತಿಯನ್ನು ಜಪಾನಿಗಳು ಕದಲಿಸಲಾಗಲಿಲ್ಲ. ಸುಮಾರು ೩ | ವರ್ಷ ಅವರನ್ನು ಬಂಧನದಲ್ಲಿಟ್ಟಿದ್ದರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆವುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜೆ. ಟಿ. ಮದರಾಸು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಬಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

At Ranjit

NAIMA

ಅಶೋಕಕುಮಾರ್, ವೀಣಾ, ಸಿತಾರ ಪಾತ್ರವಹಿಸಿರುವ

ನಜ್ಲ

ಪ್ರತಿ ದಿನ 3 ಆಟ'ಗಳು

ಹಸಕ ಬೆಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟ & ಸನ್ಸ್

ಶಿವರಾಂಪೇಟೆ ಮೈಸೂರು.

At Opera—

6 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ

ಕನ್ನಾಂಬಾ ಪಾತ್ರವಹಿಸಿರುವ

ಆಶೋಕ ಕುಮಾರ

Morning Shows

faom 25—1—46

It Ain't Hay

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಪಾವಲಿ ೧ ಕ್ಕೆ ಒಂದು ಕೂಪಾಯಿ.

ವಿಳಾಸ — ಶಕ್ತಿ ಸುಧಾ, ೧೦೬೭ ಚಾಮುಂಡಿಪುರಂ, ಮೈಸೂರು